(21) ಸುಳ್ಯ ತಾಲ್ಲೂಕಿನ ತೊಡಿಕಾನ ಅಪ್ರೋಚ್ ರಸ್ತೆ ಮತ್ತಿತರ ಮುಂಖ್ಯ ಸೇತುವೆ ಕೆಲಸಗಳನ್ನು ಮಾಡಿಸುವ ಬಗ್ಗೆ.

ಶ್ರೀ ಕೆ. ಕಂಶಾಲ್ (ಸುಳ್ಯ).--ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ತೋಡಿಕಾನ ಅಪ್ರೋಚ್ ರಸ್ತೆ, ಮತ್ತು ಈ ರಸ್ತೆಯಲ್ಲಿ ಭಾಗ ವಗಾಡಲಂ ಸೇತುವೆಯೂ ಸೇರಿದಂತೆ ಆರ್.ಡಿ.ಎಸ್. ಎಂ.ಎನ್.ಪಿ. ತೋಡಿಕಾನ. ಎ.ಇ. ೩೪೭/೮೫-೮೬ರಂತೆ, ರೂ. ೨,೦೦,೦೦೦ (ಲಕ್ಷ) ಮತ್ತು ನಂಬರು ೫೩೭-ಯು.ಎನ್.ಪಿ. ತೋಡಿಕಾನ ೮೬-೮೭ರಂತೆ ರಿವೈಸ್ಡ್ ಎಸ್ಟೀಮೇಟ್ ರೂ. ೪೦೦,೦೦೦-೦೦ ಅಂದಾಜು ಪಟ್ಟಿ ಮಂಜೂರಾತಿ ಆಗಿ, ಈಗ ಒಂದು ವರ್ಷದಿಂದ ಈ ಕೆಲಸ ಹಿಂದೆ ಬಿದ್ದಿದೆ. ತೋಡಿಕಾನ ಬಾಗವಂಡಲ ರಸ್ತೆ ಮತ್ತು ಸೇತುವೆಯು ಅತೀ ಪ್ರಮುಖವಾದ ವಿಷಯವಾಗಿರುತ್ತದೆ. ದಕ್ಷಿಣ ಕನ್ನಡ ಜಿಲೆ ಯ ಸುಳ್ಯ ತಾಲ್ಲೂಕಿನ ಸುಬ್ರಮಣ್ಯದಿಂದ-ಸೋಮವಾರಪೇಟೆವರೆಗಿನ ಅಂತರ್‌ಜಿಲ್ಲಾ ರಸ್ತೆ-ನಂ.ಎಂ.ಜಿ.ಎಲ್.-ಕೋ. ೧೫೯-೮೫-೮೬ ತಾರೀಖು ೧೧-೩-೮೬ ರಂತೆ ಮುಖ್ಯ ಅಭಿಯಂತರದ ಕಛೇರಿಯಿಂದ ಶಿಫಾರಸ್ಸು ಆಗಿದ್ದು ಈ ಬಗ್ಗೆ ವಂದಿನ ಕ್ರಮ ಕೈಕೊಳ್ಳದೆ ಹಿಂದೆ ಬಿದ್ದಿರುತ್ತದೆ. (ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಪಿ.ಡಬ್ಲ್ಯು.ಡಿ. ೬೪-ಸಿಎಸ್‌ಆರ್-೮೬, ತಾ. ೧೭-೨-೮೬ರಂತೆ)

ಸುಳ್ಳ ವಿಧಾನಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕೇಪುಹಳ್ಳ ಸೇತುವೆ ಮತ್ತು ರಸ್ತೆ ನಂಬರು. ಪಿ.ಡಿ.ಬಿ.ಆರ್.ಜಿ. ಕೇಪುಹಳ್ಳ, ದಕ್ಷಿಣ ಕನ್ನಡ ಜಿಲೆ-೮೬ ತಾ ೨೨-೧-೮೬ರಂತೆ ಮಂಜೂರಾತಿಗಾಗಿ ಕ್ರಮ ಮುಂದುವರಿಸದೆ ಬಾಕಿ ಉಳಿದಿರುತ್ತದೆ. ಆದುದರಿಂದ ಈ ಮೇಲಿನ ಮೂರು ಕಡೆಯ ರಸ್ತೆ ಹಾಗೂ ಚಿಕ್ಕ ಸೇತುವೆಗಳು ಸಾರ್ವಜನಿಕ ದೃಷ್ಟಿಯಿಂದ ಅತಿ ಪ್ರಾಮುಖ್ಯವಾದ ಕಾಮಗಾರಿ ಆಗಿರುವುದರಿಂದ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.--ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಯವರ ಗಮನಕ್ಕೆ ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ತರುತ್ತೇನೆ.

(22) ಬೈಂದೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ರಚಿಸುವ ಬಗ್ಗೆ

ಶ್ರೀ ಜಿ. ಎಸ್. ಆಚಾರ್ (ಬೈಂದೂರ್).— ಮೂರು ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾಯಿತು. ಅಂದಿನಿಂದ ಇಂದಿನತನಕವೂ ಕಾಲೇಜು ಸರ್ಕಾರಿ ಕಿರಿಯ ಕಾಲೇಜಿನೊಳಗೆ ನಡೆಯುತ್ತಿದೆ. ಇದರಿಂದಾಗಿ ಕಿರಿಯ ಕಾಲೇಜಿಗೆ ಸಾಕಷ್ಟು ಸ್ಥಳಾವಕಾಶ ಇಲ್ಲದೆ ಬಹಳ ತೊಂದರೆ ಆಗಿದೆ. ಪ್ರಥಮ ದರ್ಜೆ ಕಾಲೇಜಿಗೆ ಸಹಾ ಸಾಕಷ್ಟು ಕೋಣೆಗಳು ಸಿಕ್ಕದೆ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅಧ್ವಾನವಾಗಿದೆ ಪ್ರಥಮದರ್ಜೆ ಕಾಲೇಜು ಕಟ್ಟಡಗಳು ಕಟ್ಟಿಸಲು ಸಾಕಷ್ಟು ಸರಕಾರಿ ಜಾಗವನ್ನು ಕಾದಿರಿಸಲಾಗಿದೆ ಆದರೂ ಕ್ರಮ ತೆಗೆದುಕೊಳ್ಳದಿರುವುದು ನಮ್ಮ ದುರ್ದೈವ. ಹೊಸ ಶಿಕ್ಷಣಸಚಿವರು ಬೇಡಿಕೆ ಈಡೇರಿಸಲು ಶ್ರಮಿಸಂತಿರುವುದು ನಮ್ಮ ಸುದೈವ ಹಿಂದುಳಿದವರು, ಬಡವರು, ಅಲ್ಪ ಸಂಖ್ಯಾತರು ಹೆಚ್ಚಾಗಿ ಇರುವ ಬೈಂದೂರಿಗೆ ಕಾಲೇಜು ಬಂದುದು ಜನತೆಯ ಸುದೈವ. ಸರ್ಕಾರದ ಕಿರಿಯ ಹಾಗೂ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸ್ಥಳಾವಕಾಶ ವಿಲ್ಲದೆ ಕಲಿಯುವಿಕೆಗೆ ತೊಡಕಾಗಿರುವುದು ವಿದ್ಯಾರ್ಥಿಗಳ ದುರ್ದೈವ. ಬೆಳೆಯುವ ಮಕ್ಕಳ ಬದುಕನ್ನು ಬಂಗಾರ ಮಾಡುವ ಜ್ಯೋತಿಯವರಿಗೆ ಕೊಂಡೊಯ್ಯಬೇಕಾದ ಬೈಂದೂರು ಪ್ರಥಮದರ್ಜೆ ಕಾಲೇಜಿಗೆ ಬೇಕಾದ ಹೊಸ ಕಟ್ಟಡ ರಚಿಸಲು ಧರ್ಮಸ್ಥಳದ ಶ್ರೀ ಮಂಜುನಾಥ ಕೃಪೆಯಿಂದ ಸ್ಫೂರ್ತಿ ಬರಲಿ, ಕೂಡಲೇ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿ ಎಂದು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ --ಅಧ್ಯಕ್ಷರೇ, ಈಗ ಏನಾಗಿದೆ ಅಂದರೆ, ೧೯೮೫ರಲ್ಲಿ ಅಲ್ಲಿಗೆ ಕಾಲೇಜನ್ನು ಮಂಜೂರು ಮಾಡಿದ್ದು. ಬಹುತೇಕ ಕಾಲೇಜುಗಳಿಗೆ ಕಟ್ಟಡಗಳನ್ನು ಕಟ್ಟಿಸುವುದು ಕಷ್ಟವಾಗಿದೆ. ಕಳೆದ ವರ್ಷದಿಂದಲೂ ಅದು ಆಗಿಲ್ಲ, ಈ ವರ್ಷ ಪೆಚ್ಚಿಗೆ ಹಣವನ್ನು ಒದಗಿಸಿದ್ದೇವೆ. ಮಾನ್ಯ ಸದಸ್ಯರು ಈಗಾಗಲೇ ಹೇಳಿರುವುದು ನನ್ನ ಗಮನಕ್ಕೆ ಬಂದಿದೆ. ಕಿರಿಯ ಕಾಲೇಜಿನಲ್ಲಿ ಫಸ್ಟ್ ಗ್ರೇಡ್ ಕಾಲೇಜು ನಡೆಯುತ್ತಾ ಇದೆ. ಸದ್ಯಕ್ಕೆ ತೊಂದರೆ ಏನೂ ಇಲ್ಲ. ಅಲ್ಲಿ ಕಟ್ಟಡವನ್ನು ಕಟ್ಟಿಸಬೇಕು. ಈ ವರ್ಷದಲ್ಲಿಯೇ ಕಟ್ಟಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.